# 15ರಂದು ಎನ್‌ಐಟಿಕೆ ಘಟಿಕೋತ್ಸವ

ಮಂಗಳೂರು:ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ ಸುರತ್ಕಲ್ (ಎನ್‌ಐಟಿಕೆ) 20ನೇ ವಾರ್ಷಿಕ ಘಟಿಕೋತ್ಸವ ಅ.15ರಂದು ಬೆಳಗ್ಗೆ 10.30ಕ್ಕೆ ಎನ್‌ಐಟಿಕೆ ಸುರತ್ಕಲ್‌ನ ಹೊಸ ಕ್ರೀಡಾ ಸಂಕೀರ್ಣದಲ್ಲಿ ನಡೆಯಲಿದ್ದು, ಈ ಸಂದರ್ಭ ಸಿಆರ್‌ಎಫ್ ಮತ್ತು ಸಿಒಇಸ್ ಕಟ್ಟಡವನ್ನು ಕೇಂದ್ರ ಶಿಕ್ಷಣ, ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಉದ್ಘಾಟಿಸಲಿದ್ದಾರೆ ಎಂದು ಸುರತ್ಕಲ್ ಎನ್‌ಐಟಿಕೆ ಪ್ರಭಾರ ನಿರ್ದೇಶಕ ಪ್ರೊ.ಜಿ.ಸಿ. ಮೋಹನ್ ಕುಮಾರ್ ತಿಳಿಸಿದರು.

ಘಟಿಕೋತ್ಸವದಲ್ಲಿ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಎನ್‌ಐಟಿಕೆ ಹಳೆ ವಿದ್ಯಾರ್ಥಿಗಳಾದ ಬೆಂಗಳೂರಿನ ಸೋನಾ ಗ್ರೂಪ್ ಆಫ್ ಇಂಡಸ್ಟ್ರೀಸ್ ವ್ಯವಸ್ಥಾಪಕ ನಿರ್ದೇಶಕ ಯಜ್ಞ ನಾರಾಯಣ ಮತ್ತು ಭಾರತೀಯ ವಲಯ ಮೈರೆ ಟೆಕ್ನಿಮಾಂಟ್ ಉಪಾಧ್ಯಕ್ಷ ಮಿಲಿಂದ್ ವಿ. ಬರಿಡೇ ಭಾಗವಹಿಸಲಿದ್ದಾರೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

ಘಟಿಕೋತ್ಸವದಲ್ಲಿ ಒಟ್ಟು 1787 ಅಭ್ಯರ್ಥಿಗಳು ಪದವಿ ಪಡೆಯುತ್ತಾರೆ. ಇದರಲ್ಲಿ 126 ಪಿಎಚ್‌ಡಿ, 817 ಪಿಜಿ ಮತ್ತು 844 ಬಿಟೆಕ್ ವಿದ್ಯಾರ್ಥಿಗಳು ಸೇರಿದ್ದಾರೆ. 249 ಬಿ:ಟೆಕ್ ವಿದ್ಯಾರ್ಥಿಗಳಿಗೆ ತಮ್ಮ ಬಿಟೆಕ್ ಪದವಿಯೊಂದಿಗೆ ಇತರ ವಿಭಾಗಗಳಲ್ಲಿ ಮೈನರ್ ಪದವಿಯನ್ನು ಸಹ ನೀಡಲಾಗುತ್ತಿದೆ. ಮೊದಲ ಬಾರಿ ಎನ್‌ಐಟಿಕೆ ಬಿ.ಟೆಕ್ (ಆನರ್ಸ್) ಪದವಿ ನೀಡುತ್ತಿದೆ. ಒಂಬತ್ತು ಬಿ.ಟೆಕ್ ವಿದ್ಯಾರ್ಥಿಗಳು, 30ಪಿಜಿ ವಿದ್ಯಾರ್ಥಿಗಳು ಅತ್ಯಕ ಸಿಜಿಪಿಎ ಗಳಿಸಿರುವ ಹಿನ್ನೆಲೆಯಲ್ಲಿ ವಿವಿಧ ಏಜೆನ್ಸಿಗಳು ಪ್ರಾಯೋಜಿಸಿದ ಇನ್‌ಸ್ಟಿಟ್ಯೂಟ್ ಚಿನ್ನದ ಪದಕಗಳು ಮತ್ತು ಪದಕಗಳನ್ನು ಸ್ವೀಕರಿಸಲಿದ್ದಾರೆ ಎಂದರು. ಎನ್‌ಐಟಿಕೆಯಲ್ಲಿ 48ಕೋಟಿ ರೂ. ವೆಚ್ಚದಲ್ಲಿ 10,394 ಚದರ ಮೀಟರ್ ವಿಸ್ತೀರ್ಣದಲ್ಲಿ ಹೊಸದಾರಿ ನಿರ್ಮಿಸಲಾದ ಕೇಂದ್ರೀಯ ಸಂಶೋಧನಾ ಸೌಲಭ್ಯ (ಸಿಆರ್‌ಎಫ್) ಮತ್ತು ಸ್ಕೂಲ್ ಆಫ್ ಇಂಟರ್ ಡಿಸಿಪ್ಲಿನರಿ ಸ್ಟಡೀಸ್ (ಸಿಒಇಎಸ್) ಕಟ್ಟಡವನ್ನು ಸಚಿವ ಧರ್ಮೇಂದ್ರ ಪ್ರಧಾನ್ ಉದ್ಘಾಟಿಸಲಿದ್ದಾರೆ. 54.76 ಕೋಟಿ ರೂ. ವೆಚ್ಚದ 11246 ಚದರ ಮೀಟರ್ ವಿಸ್ತೀರ್ಣದ ಲೆಕ್ಚರ್ ಹಾಲ್ ಕಾಂಪ್ಲೆಕ್ಸ್-ಬ್ಲಾಕ್ ಡಿ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಲಿದ್ದಾರೆ.ಭಾರತ ಸರಕಾರದ ಉನ್ನತ ಶಿಕ್ಷಣ ಹಣಕಾಸು ಸಂಸ್ಥೆ (ಎಚ್‌ಇಎಫ್‌ಎ)ಯಿಂದ 80ಕೋಟಿ ರೂ. ಆರ್ಥಿಕ ನೆರವಿನೊಂದಿಗೆ ಕೇಂದ್ರೀಯ ಸಂಶೋಧನಾ ಫೆಸಿಲಿಟಿ ಎನ್‌ಐಟಿಕೆನ್ನು ಸ್ಥಾಪಿಸಲಾಗಿದೆ ಎಂದು ತಿಳಿಸಿದರು. ಡೀನ್ ಡಾ.ವಿದ್ಯಾ ಶೆಟ್ಟಿ, ಪ್ರೊ.ಅರುಣ್, ಎನ್‌ಐಟಿಕೆ ಸಾರ್ವಜನಿಕ ಸಂಪರ್ಕಾಧಿಕಾರಿ ವೈಷ್ಣವಿ ಆರ್. ಉಪಸ್ಥಿತರಿದ್ದರು.




Samuytha kanranataka, Date: 14/10/22. p, no - 02